# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 550 |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ |
| ಉತ್ತರಿಸಬೇಕಾದ ದಿನಾಂಕ | : | 19.07.2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಇರುವ ಒಟ್ಟು ವಸತಿ ಶಾಲೆಗಳ ಸಂಖ್ಯೆ ಎಷ್ಟು; ಪ್ರಸ್ತುತ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಪ್ರತಿ ವಸತಿ ಶಾಲೆಗೆ ಎಷ್ಟು ವಿದ್ಯಾರ್ಥಿಗಳ ಪ್ರವೇಶಾತಿ ನಿಗಧಿಪಡಿಸಲಾಗಿದೆ; ಪ್ರವೇಶಾತಿ ನಿಗಧಿಪಡಿಸಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ 807 ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿವಾಜಪೇಯಿ/ಶ್ರೀ ನಾರಾಯಣ ಗುರು ಇತ್ಯಾದಿ ಹೆಸರಿನಿಂದ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.<br><br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ವಸತಿ ಶಾಲೆಗಳಿಗೆ ಪ್ರತಿ ವಸತಿ ಶಾಲೆಗೆ ಪ್ರತಿ ವರ್ಷ 6ನೇ ತರಗತಿಗೆ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ ಡಾ\|\| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ/ ಶ್ರೀಮತಿ ಇಂದಿರಾಗಾಂಧಿ ವಸತಿ 50 ವಿದ್ಯಾರ್ಥಿಗಳಿಗೆ ಹಾಗೂ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ 80 ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ಎಲ್ಲಾ ವಸತಿ ಶಾಲೆಗಳಿಗೆ ಪ್ರಾರಂಭಿಕ ತರಗತಿಯಾದ 6ನೇ ತರಗತಿಯ 41110 ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರವೇಶ ಪರೀಕ್ಷೆ ನಡೆಸಿ ಆನ್ ಲೈನ್ ಮುಖಾಂತರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ.<br>6ನೇ ತರಗತಿ ಪ್ರವೇಶಾತಿಗೆ ನಿಗಧಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿದೆ.<br>ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ದಿನಾಂಕ:19.06.2021 ರಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿಯ ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆ ಮತ್ತು ಸೀಟು ಹಂಚಿಕೆ ಕಾರ್ಯವನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (CET Cell) ವಹಿಸಲಾಗಿದೆ. ಅದರಂತೆ, 2024-25ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ರಾಜ್ಯಾದ್ಯಂತ ಏಕಕಾಲದಲ್ಲಿ ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತಿದೆ.<br>ಸರ್ಕಾರದ ಆದೇಶ ಸಂಖ್ಯೆ: ಸಕಇ-ಎಂ.ಡಿ.ಎಸ್ /78/2023(P-1), ದಿನಾಂಕ: 12.02.2024 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಅಧೀನದಲ್ಲಿ |

ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ರಷ್ಟು ಹಾಗೂ ಅದೇ ಜಿಲ್ಲೆಯ ಇತರ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ 25 ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಲು ಸ್ಥಳೀಯ ಅಭ್ಯರ್ಥಿಯ ಪ್ರಮಾಣ ಪತ್ರ ಪಡೆಯುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂ.ಡಿ.ಎಸ್ 2022, ದಿನಾಂಕ:15.03.2024 ರಲ್ಲಿ ವಿಶೇಷ ವರ್ಗಗಳಿಗೆ ಸೇರಿದ ಸಫಾಯಿ ಕರ್ಮಚಾರಿ/ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ಚಿಂದಿಆಯುವವರು/ಸ್ಮಶಾನ ಕಾರ್ಮಿಕರ ಮಕ್ಕಳಿಗೆ /ಬಾಲಕಾರ್ಮಿಕರು/ಜೀತ ವಿಮುಕ್ತ ಕಾರ್ಮಿಕರ ಮಕ್ಕಳು/ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು/25% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು/ ಹೆಚ್.ಐ.ವಿ ಗೆ ತುತ್ತಾದ ಪೋಷಕರ ಮಕ್ಕಳು/ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು/ ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ-ಅತೀ ಸೂಕ್ಷ್ಮ ಸಮುದಾಯದ/ಸೈನಿಕರು ಮತ್ತು ಮಾಜಿ ಸೈನಿಕರು/ ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು/ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಶೇ. 50 ರಷ್ಟು (20555) ಸೀಟುಗಳಿಗೆ ನೇರ ಪ್ರವೇಶಾತಿ ಕಲ್ಪಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ.

6ನೇ ತರಗತಿಗೆ ಪ್ರವೇಶಾತಿಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020 ದಿನಾಂಕ:12.11.2021 ರನ್ವಯ ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಆನ್ ಲೈನ್ ಸೀಟು ಹಂಚಿಕೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುತ್ತದೆ.

1.ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು (ಮೆರಿಟ್).

2.ಅಭ್ಯರ್ಥಿಗೆ ಅನ್ವಯವಾಗುವ ಮೀಸಲಾತಿ.

3.ಅಭ್ಯರ್ಥಿಯು ಸೇರ ಬಯಸುವ ವಸತಿ ಶಾಲೆಗಳ ಶಾಲಾವಾರು ಆಧ್ಯತೆ.

ಮೇಲ್ಕಂಡ ಅಂಶಗಳ ಆಧಾರದ ಮೇಲೆ seat matrix ಸಿದ್ಧಪಡಿಸಿ ಗಣಕೀಕೃತ ಸ್ವಯಂ ಆಯ್ಕೆ (Computerized auto selection) ಮೂಲಕ ಪಾರದರ್ಶಕವಾಗಿ ಸೀಟು ಹಂಚಿಕೆ ಮಾಡಿ ಪ್ರವೇಶಾವಕಾಶ ನೀಡಲಾಗುತ್ತಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಒಟ್ಟು 821 ವಸತಿ ಶಾಲೆ/ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಪ್ರಸ್ತುತ ವಸತಿ ಶಾಲೆ/ಕಾಲೇಜುಗಳಲ್ಲಿ 191153 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ವಿವರ ಅನುಬಂಧದಲ್ಲಿರಿಸಿದೆ. ಪ್ರಸ್ತುತ 6ನೇ ತರಗತಿ ಪ್ರವೇಶಾತಿ ಚಾಲ್ತಿಯಲ್ಲಿರುತ್ತದೆ.

| | | |
|---|---|---|
| ಆ | ಸದರಿ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಬೋಧಕ ಮತ್ತು ಬೋಧಕೇತರ ನೌಕರರ ಸಂಖ್ಯೆ ಎಷ್ಟು; ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಬರುವ ವಸತಿ ಶಾಲೆಗಳಲ್ಲಿ 5410 ಬೋಧಕ ಹಾಗೂ 1134 ಬೋಧಕೇತರ ನೌಕರರ ಕಾರ್ಯ ನಿರ್ವಹಿಸುತ್ತಿದ್ದಾರೆ. ಖಾಲಿ ಇರುವ 2756 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿ, ಆರ್ಥಿಕ ಇಲಾಖೆಯು ಸಹಮತಿಸಿರುವಂತೆ 875 (ಉಳಿಕೆ ಮೂಲ) ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಲಾಗಿದೆ.<br>ಮುಂದುವರೆದು, ಕಲ್ಯಾಣ ಕರ್ನಾಟಕದ 555 ಹುದ್ದೆಗಳನ್ನು ಹಾಗೂ 29 ಬ್ಯಾಕ್ ಲಾಗ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಇ | ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು ಬಾಡಿಗೆ ಕಟ್ಟಡ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಪರಿಹರಿಸಲಾಗುವುದು; ಬಾಡಿಗೆ ಕಟ್ಟಡಗಳಲ್ಲಿ ಸರಿಯಾದ ಕಟ್ಟಡವಿಲ್ಲದ ಕಾರಣ ವಿದ್ಯಾರ್ಥಿಗಳು ಪರದಾಡುತ್ತಿರುವುದು ನಿಜವೇ; ನಿಜವಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-144 ಮತ್ತು ಹಿಂದುಳಿದ ವರ್ಗ-174 ವಸತಿ ಶಾಲೆಗಳು ಒಟ್ಟಾರೆ 821 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ಪೈಕಿ, ಪರಿಶಿಷ್ಟ ಜಾತಿ-389, ಪರಿಶಿಷ್ಟ ವರ್ಗ-109 ಮತ್ತು ಹಿಂದುಳಿದ ವರ್ಗ-136 ಒಟ್ಟು 634 ವಸತಿ ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ ಪರಿಶಿಷ್ಟ ಜಾತಿ-114, ಪರಿಶಿಷ್ಟ ವರ್ಗ-35 ಮತ್ತು ಹಿಂದುಳಿದ ವರ್ಗ-38 ಒಟ್ಟು 187 ವಸತಿ ಶಾಲೆಗಳು ಸ್ವಂತ ಕಟ್ಟಡವಿಲ್ಲದೆ ಬಾಡಿಗೆ/ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 187 ವಸತಿ ಶಾಲೆಗಳ ಪೈಕಿ 37 (ಪರಿಶಿಷ್ಟ ಜಾತಿ-23, ಪರಿಶಿಷ್ಟ ವರ್ಗ 08 ಮತ್ತು ಹಿಂದುಳಿದ ವರ್ಗ 06) ವಸತಿ ಶಾಲೆಗಳು ವಿವಿಧ ಹಂತದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 11 (ಪರಿಶಿಷ್ಟ ಜಾತಿ 08 ಮತ್ತು ಪರಿಶಿಷ್ಟ ವರ್ಗ 03) ವಸತಿ ಶಾಲೆಗಳನ್ನು ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆ ಹಾಗೂ 09 (ಪರಿಶಿಷ್ಟ ಜಾತಿ-04 ಮತ್ತು ಪರಿಶಿಷ್ಟ ವರ್ಗ-05) ವಸತಿ ಶಾಲೆಗಳನ್ನು ನಿರ್ಮಾಣ ಮಾಡಲು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಿರ್ಮಾಣ ಮಾಡಲಾಗುತ್ತಿದೆ.<br>ನಿವೇಶನ ಲಭ್ಯವಿರುವ 110 ವಸತಿ ಶಾಲೆಗಳ ಪೈಕಿ 38 (ಪರಿಶಿಷ್ಟ ಜಾತಿ-23, ಪರಿಶಿಷ್ಟ ವರ್ಗ-09 ಮತ್ತು ಹಿಂದುಳಿದ ವರ್ಗ-06) ವಸತಿ ಶಾಲೆಗಳಿಗೆ ಟೆಂಡರ್ ಕರೆಯಲಾಗಿದ್ದು, ಮೌಲ್ಯಮಾಪನದ ಪ್ರಕ್ರಿಯೆಯಲ್ಲಿರುತ್ತವೆ. ಉಳಿದ 78 (ಪರಿಶಿಷ್ಟ ಜಾತಿ-47, ಪರಿಶಿಷ್ಟ ವರ್ಗ -09 ಮತ್ತು ಹಿಂದುಳಿದ ವರ್ಗ-22) ವಸತಿ ಶಾಲೆಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಅನುದಾನದ ಲಭ್ಯತೆ ಆಧಾರದ ಮೇಲೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದು.<br>ನಿವೇಶನ ಲಭ್ಯವಿಲ್ಲದ 14 ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ -09, ಪರಿಶಿಷ್ಟ ವರ್ಗ -01 ಮತ್ತು ಹಿಂದುಳಿದ ವರ್ಗ-04 ವಸತಿ ಶಾಲೆಗಳು ಬಾಡಿಗೆ/ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಿವೇಶನ ಪಡೆಯಲು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |

| | | |
|---|---|---|
| ಈ | ರಾಜ್ಯದಲ್ಲಿನ ಹಲವಾರು ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮೂಲಭೂತ ಸೌಲಭ್ಯಗಳ ಕೊರತೆಯು ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ತೊಡಕಾಗುವುದಿಲ್ಲವೆ? ಈ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು? (ವಿವರ ನೀಡುವುದು) | ಬಂದಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2024-25ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿ ಈ ಸಂಬಂಧ ಯಾವುದೇ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿರುವುದಿಲ್ಲ. ಅನುದಾನ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು. |

ಸಕಇ 175 ಎಂಡಿಎಸ್ 2024

(ಡಾ.ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.

## Annexure-01 380(550)

### SCHOOLWISE ADMITTED STUDENTS DETAILS 2024-25

| SI NO | CT | NO OF SCHOOLS | TOTAL SACTION | NUMBER OF STUDENTS | | | | | | | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | 6TH | | | | 7TH | | | | 8TH | | | | 9TH | | | | 10TH | | | | 11TH | | | | 12TH | | | | TOTAL | | | |
| | | | | SAN | ADM | | | SAN | ADM | | | SAN | ADM | | | SAN | ADM | | | SAN | ADM | | | SAN | ADM | | | SAN | ADM | | | SAN | ADM | | |
| | | | | | BOY | GIRL | TOTAL | | BOY | GIRL | TOTAL | | BOY | GIRL | TOTAL | | BOY | GIRL | TOTAL | | BOY | GIRL | TOTAL | | BOY | GIRL | TOTAL | | BOY | GIRL | TOTAL | | BOY | GIRL | TOTAL |
| 1 | BAGALKOT | 30 | 7880 | 1480 | 569 | 695 | 1264 | 1480 | 555 | 916 | 1471 | 1480 | 597 | 878 | 1475 | 1480 | 651 | 816 | 1467 | 1480 | 526 | 865 | 1391 | 240 | 112 | 108 | 220 | 240 | 111 | 107 | 218 | 7880 | 3122 | 4384 | 7506 |
| 2 | BALLARI | 19 | 4750 | 950 | 422 | 454 | 876 | 950 | 481 | 579 | 1060 | 950 | 448 | 505 | 953 | 950 | 431 | 501 | 932 | 950 | 411 | 484 | 895 | 0 | 0 | 0 | 0 | 0 | 0 | 0 | 0 | 4750 | 2193 | 2523 | 4716 |
| 3 | BELAGAVI | 54 | 14140 | 2740 | 955 | 1200 | 2155 | 2690 | 1181 | 1700 | 2881 | 2690 | 1298 | 1697 | 2995 | 2690 | 1371 | 1511 | 2882 | 2690 | 1147 | 1569 | 2716 | 320 | 158 | 151 | 309 | 320 | 159 | 153 | 312 | 14140 | 6268 | 7982 | 14250 |
| 4 | BENGALURU RURAL | 12 | 3230 | 550 | 77 | 151 | 228 | 550 | 164 | 334 | 498 | 550 | 182 | 340 | 522 | 550 | 187 | 344 | 531 | 550 | 167 | 337 | 504 | 240 | 115 | 110 | 225 | 240 | 110 | 106 | 216 | 3230 | 1002 | 1722 | 2724 |
| 5 | BENGALURU URBAN | 5 | 1320 | 200 | 46 | 52 | 98 | 200 | 105 | 80 | 185 | 200 | 95 | 93 | 188 | 200 | 92 | 84 | 176 | 200 | 90 | 76 | 166 | 160 | 41 | 98 | 139 | 160 | 40 | 94 | 134 | 1320 | 509 | 577 | 1086 |
| 6 | BIDAR | 29 | 7720 | 1480 | 385 | 548 | 933 | 1480 | 551 | 926 | 1477 | 1480 | 553 | 920 | 1473 | 1480 | 625 | 834 | 1459 | 1480 | 552 | 838 | 1390 | 160 | 77 | 74 | 150 | 160 | 81 | 77 | 158 | 7720 | 2823 | 4217 | 7040 |
| 7 | CHAMARAJA NAGARA | 21 | 5320 | 1000 | 236 | 308 | 544 | 1000 | 349 | 543 | 892 | 1000 | 377 | 537 | 914 | 1000 | 361 | 577 | 938 | 1000 | 346 | 549 | 895 | 160 | 82 | 78 | 160 | 160 | 81 | 77 | 158 | 5320 | 1832 | 2669 | 4501 |
| 8 | CHIKKABAL LAPURA | 23 | 5810 | 1130 | 222 | 358 | 580 | 1130 | 369 | 694 | 1063 | 1130 | 393 | 701 | 1094 | 1050 | 393 | 636 | 1029 | 1050 | 393 | 679 | 1072 | 160 | 81 | 78 | 159 | 160 | 79 | 75 | 154 | 5810 | 1930 | 3221 | 5151 |
| 9 | CHIKKAMAG ALURU | 34 | 8570 | 1650 | 386 | 433 | 819 | 1650 | 624 | 705 | 1329 | 1650 | 689 | 909 | 1598 | 1650 | 674 | 855 | 1529 | 1650 | 603 | 844 | 1447 | 160 | 73 | 70 | 143 | 160 | 77 | 74 | 151 | 8570 | 3126 | 3890 | 7016 |
| 10 | CHITRADUR GA | 35 | 8820 | 1700 | 538 | 541 | 1079 | 1700 | 698 | 969 | 1667 | 1700 | 705 | 984 | 1689 | 1700 | 714 | 981 | 1695 | 1700 | 680 | 982 | 1662 | 160 | 80 | 76 | 156 | 160 | 79 | 76 | 155 | 8820 | 3494 | 4609 | 8103 |
| 11 | DAKSHINA KANNADA | 12 | 3010 | 600 | 110 | 80 | 190 | 600 | 284 | 293 | 577 | 550 | 289 | 295 | 584 | 550 | 247 | 270 | 517 | 550 | 236 | 258 | 494 | 80 | 41 | 39 | 80 | 80 | 38 | 37 | 75 | 3010 | 1245 | 1272 | 2517 |
| 12 | DAVANAGE RE | 23 | 5820 | 1100 | 316 | 441 | 757 | 1100 | 402 | 699 | 1101 | 1100 | 414 | 686 | 1100 | 1100 | 463 | 634 | 1097 | 1100 | 394 | 682 | 1076 | 160 | 81 | 78 | 159 | 160 | 81 | 77 | 158 | 5820 | 2150 | 3298 | 5448 |
| 13 | DHARWAD | 15 | 4130 | 730 | 208 | 265 | 473 | 730 | 264 | 445 | 709 | 730 | 301 | 427 | 728 | 730 | 322 | 402 | 724 | 730 | 287 | 375 | 662 | 240 | 98 | 94 | 192 | 240 | 105 | 100 | 205 | 4130 | 1584 | 2109 | 3693 |
| 14 | GADAG | 16 | 4380 | 780 | 300 | 349 | 649 | 780 | 293 | 481 | 774 | 780 | 294 | 466 | 760 | 780 | 342 | 422 | 764 | 780 | 281 | 442 | 723 | 240 | 92 | 88 | 180 | 240 | 107 | 102 | 209 | 4380 | 1708 | 2351 | 4059 |
| 15 | HASSAN | 38 | 9570 | 1850 | 454 | 505 | 959 | 1850 | 809 | 975 | 1784 | 1850 | 820 | 955 | 1775 | 1850 | 843 | 937 | 1780 | 1850 | 750 | 931 | 1681 | 160 | 81 | 78 | 159 | 160 | 80 | 77 | 157 | 9570 | 3837 | 4458 | 8295 |
| 16 | HAVERI | 28 | 7380 | 1380 | 449 | 719 | 1168 | 1380 | 455 | 947 | 1402 | 1380 | 472 | 924 | 1396 | 1380 | 508 | 873 | 1381 | 1380 | 449 | 899 | 1348 | 240 | 119 | 115 | 234 | 240 | 118 | 114 | 232 | 7380 | 2570 | 4591 | 7161 |
| 17 | KALABURAG I | 44 | 11230 | 2150 | 558 | 782 | 1340 | 2150 | 807 | 1323 | 2130 | 2150 | 824 | 1316 | 2140 | 2150 | 936 | 1198 | 2134 | 2150 | 801 | 1257 | 2058 | 240 | 118 | 114 | 232 | 240 | 122 | 117 | 239 | 11230 | 4166 | 6107 | 10273 |
| 18 | KODAGU | 8 | 2380 | 380 | 73 | 76 | 149 | 380 | 163 | 194 | 357 | 380 | 166 | 178 | 344 | 380 | 163 | 185 | 348 | 380 | 155 | 174 | 329 | 240 | 122 | 117 | 239 | 240 | 112 | 107 | 219 | 2380 | 953 | 1032 | 1985 |
| 19 | KOLAR | 25 | 6320 | 1200 | 272 | 327 | 599 | 1200 | 510 | 633 | 1143 | 1200 | 524 | 647 | 1171 | 1200 | 570 | 614 | 1184 | 1200 | 572 | 578 | 1150 | 160 | 59 | 57 | 116 | 160 | 77 | 74 | 151 | 6320 | 2585 | 2929 | 5514 |
| 20 | KOPPAL | 30 | 7370 | 1450 | 553 | 703 | 1256 | 1400 | 509 | 942 | 1451 | 1400 | 524 | 875 | 1399 | 1400 | 571 | 825 | 1396 | 1400 | 508 | 855 | 1363 | 160 | 81 | 77 | 158 | 160 | 79 | 76 | 155 | 7370 | 2825 | 4353 | 7178 |
| 21 | MANDYA | 38 | 9570 | 1850 | 410 | 446 | 856 | 1850 | 853 | 990 | 1843 | 1850 | 883 | 957 | 1840 | 1850 | 912 | 926 | 1838 | 1850 | 887 | 872 | 1759 | 160 | 82 | 78 | 160 | 160 | 82 | 78 | 160 | 9570 | 4109 | 4347 | 8456 |
| 22 | MYSURU | 36 | 9380 | 1780 | 361 | 448 | 809 | 1780 | 697 | 843 | 1540 | 1780 | 716 | 824 | 1540 | 1780 | 773 | 913 | 1686 | 1780 | 715 | 801 | 1516 | 240 | 115 | 110 | 225 | 240 | 110 | 106 | 216 | 9380 | 3487 | 4045 | 7532 |
| 23 | RAICHUR | 35 | 8820 | 1700 | 688 | 777 | 1465 | 1700 | 694 | 1028 | 1722 | 1700 | 687 | 1027 | 1714 | 1700 | 785 | 920 | 1705 | 1700 | 690 | 963 | 1653 | 160 | 82 | 78 | 160 | 160 | 80 | 77 | 157 | 8820 | 3706 | 4870 | 8576 |
| 24 | RAMANAGA RA | 23 | 5910 | 1150 | 203 | 239 | 442 | 1150 | 512 | 587 | 1099 | 1150 | 535 | 542 | 1077 | 1150 | 513 | 504 | 1017 | 1150 | 459 | 519 | 978 | 80 | 35 | 34 | 69 | 80 | 39 | 38 | 77 | 5910 | 2296 | 2463 | 4759 |
| 25 | SHIVAMOG GA | 33 | 8480 | 1630 | 494 | 522 | 1016 | 1630 | 647 | 949 | 1596 | 1580 | 633 | 989 | 1622 | 1580 | 639 | 916 | 1555 | 1580 | 589 | 904 | 1493 | 240 | 119 | 115 | 234 | 240 | 112 | 108 | 220 | 8480 | 3233 | 4503 | 7736 |
| 26 | TUMAKURU | 52 | 13690 | 2610 | 645 | 800 | 1445 | 2610 | 968 | 1531 | 2499 | 2610 | 1040 | 1469 | 2509 | 2610 | 1060 | 1423 | 2483 | 2610 | 967 | 1378 | 2345 | 320 | 149 | 144 | 293 | 320 | 160 | 154 | 314 | 13690 | 4990 | 6898 | 11888 |
| 27 | UDUPI | 10 | 2420 | 450 | 112 | 74 | 186 | 450 | 228 | 191 | 419 | 400 | 226 | 215 | 441 | 400 | 191 | 173 | 364 | 400 | 201 | 156 | 357 | 160 | 81 | 78 | 159 | 160 | 73 | 71 | 144 | 2420 | 1112 | 958 | 2070 |
| 28 | UTTARA KANNADA | 25 | 6480 | 1230 | 221 | 220 | 441 | 1230 | 423 | 670 | 1093 | 1180 | 431 | 650 | 1081 | 1180 | 395 | 645 | 1040 | 1180 | 365 | 573 | 938 | 240 | 123 | 118 | 241 | 240 | 107 | 102 | 209 | 6480 | 2065 | 2978 | 5043 |
| 29 | VIJAYANAGAR | 24 | 6380 | 1180 | 485 | 489 | 974 | 1180 | 558 | 638 | 1196 | 1180 | 542 | 669 | 1211 | 1180 | 579 | 622 | 1201 | 1180 | 547 | 634 | 1181 | 240 | 120 | 116 | 236 | 240 | 106 | 101 | 207 | 6380 | 2937 | 3269 | 6206 |
| 30 | VIJAYAPUR A | 23 | 5820 | 1100 | 386 | 492 | 878 | 1100 | 460 | 692 | 1152 | 1100 | 484 | 659 | 1143 | 1100 | 518 | 592 | 1110 | 1100 | 429 | 625 | 1054 | 160 | 79 | 75 | 154 | 160 | 77 | 74 | 151 | 5820 | 2433 | 3209 | 5642 |
| 31 | YADGIRI | 21 | 5410 | 1050 | 351 | 407 | 758 | 1050 | 421 | 612 | 1033 | 1050 | 437 | 605 | 1042 | 1050 | 509 | 533 | 1042 | 1050 | 418 | 579 | 997 | 80 | 39 | 38 | 77 | 80 | 41 | 39 | 80 | 5410 | 2216 | 2813 | 5029 |
| TOTAL | | 821 | 211510 | 40230 | 11486 | 13900 | 25386 | 40130 | 16034 | 23109 | 39143 | 39930 | 16579 | 22939 | 39518 | 39850 | 17338 | 21666 | 39004 | 39850 | 15615 | 21678 | 37293 | 5760 | 2733 | 2685 | 5418 | 5760 | 2721 | 2670 | 5391 | 211510 | 82507 | 108646 | 191153 |

## ಅನುಬಂಧ-2

ಪ್ರವರ್ಗವಾರು ಮೀಸಲಾತಿ ವಿವರ

| ವಸತಿ ಶಾಲೆ ವರ್ಗ | ವಸತಿ ಶಾಲೆಗಳ ಸಂಖ್ಯೆ | ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು | ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು | ಹಿಂದುಳಿದ ವರ್ಗದ ವಿದ್ಯಾರ್ಥಿಗಳು | ಸಾಮಾನ್ಯ ವರ್ಗದ ವಿದ್ಯಾರ್ಥಿಗಳು |
|---|---|---|---|---|---|
| ಪರಿಶಿಷ್ಟ ಜಾತಿ ಶಾಲೆಗಳು | 468 | 75% | 10% | 15% | 0 |
| ಪರಿಶಿಷ್ಟ ವರ್ಗದ ಶಾಲೆಗಳು | 153 | 10% | 75% | 15% | 0 |
| ಹಿಂದುಳಿದ ವರ್ಗದ ಶಾಲೆಗಳು | 162 | 15% | 10% | 75% | 0 |
| ಸಾಮಾನ್ಯ ವರ್ಗದ ಶಾಲೆಗಳು | 28 | 15% | 10% | 25% | 50% |